ಕೊಡವಿದಳು. ಮಾತ್ರವಲ್ಲದೆ ಮತ್ತೆಮತ್ತೆ ಅದು ನೀರಿನಿಂದ ಎದ್ದು ಬಂದರೆ ತಿರುಗಿ ಆಳದ ನೀರಿನೆಡೆಗೆ ಹಿಡಿದು ಮುಲಾಜಿಲ್ಲದೆ ದಬ್ಬುತ್ತಿದ್ದಳು. ಇಲ್ಲಿ ತಾಯಿಯ ಶಿಕ್ಷಣದಲ್ಲಿ ಯಾವುದೇ ರಿಯಾಯಿತಿಗಳು ಇರುವುದಿಲ್ಲ. ಕಲಿಸುವ ರೀತಿಯೂ ಒರಟಾಗಿ, ನಿರ್ದಯವಾಗಿರುತ್ತದೆ. ಇಷ್ಟು ಸೆಡವಲ್ಲಿ, ಕಠಿಣ ಮಾರ್ಗದಲ್ಲಿ ವಿದ್ಯಾಬುದ್ಧಿ ಕಲಿಸದೆ ಹೋದರೆ ಅವು ಭವಿಷ್ಯದ ಬದುಕಿನಲ್ಲಿ ಉಳಿದು ಬಾಳಲು ಸಾಧ್ಯವೇ ಇಲ್ಲ ಎಂಬ ಕಠೋರ ಸತ್ಯ ತಾಯಿಗೆ ಗೊತ್ತಿದೆ.

ಸ್ವಲ್ಪ ಹೊತ್ತಿನಲ್ಲಿ ಕಾಡಿನ ಮೇಲಿಂದ ಒಂದು ಶಬ್ದವಾಗಲು ಎಲ್ಲಾ ಆನೆಗಳು ಒಟ್ಟಾಗಿ ಅತ್ತ ಕಡೆಗೆ ನೋಡಿದವು. ಮತ್ತೊಂದು ಗುಂಪು ಯಥಾಪ್ರಕಾರ ನೀರಿನ ಕಡೆ ಇಳಿದು ಬಂದು ಮೊದಲಿದ್ದ ಎರಡು ಗುಂಪುಗಳಿಗೆ ಕೊಂಚವೂ ಡಿಸ್ಟರ್ಬ್ ಮಾಡದಂತೆ ತಾವೊಂದು ಕಡೆ ಹೋಗಿ ನಿಂತವು. ಪರಸ್ಪರ ಯಾರಿಗೂ ತೊಂದರೆಯಾಗದಂತೆ ನಡುವೆ ಸಾಕಷ್ಟು ಜಾಗ ಖಾಲಿ ಬಿಟ್ಟುಕೊಂಡು ಸಮನ್ವಯತೆ ಕಾಪಾಡಿಕೊಂಡು ಇವುಗಳು ವ್ಯವಹರಿಸುತ್ತಿದ್ದವು. ಈ ಜಾಗಕ್ಕೆ ಆನೆಗಳ ಹಿಂಡುಗಳು ಆಗಾಗ ಇಳಿದು ನೀರು ಕುಡಿದು, ಬೆನ್ನು ಉಜ್ಜಿಕೊಂಡು, ಕೆಸರಲ್ಲಿ ಉರುಳಾಡಿ ಹೋಗುತ್ತಿದ್ದ ಕಾರಣದಿಂದಲೇ ಅಲ್ಲಿದ್ದ ಮಣ್ಣು ಚೆಲ್ಲಾಪಿಲ್ಲಿಯಾಗಿತ್ತು. ಕೆಲವು ಕಡೆ ಭಾರಿ ಗುಂಡಿಗಳು ಬಿದ್ದಿದ್ದವು. ಸಲಗಗಳು ತಮ್ಮ ಕೋರೆಯಿಂದ ಮಣ್ಣನ್ನು ಹೆಬ್ಬಿ ಉಳುಮೆಯ ಹೊಲ ಮಾಡಿದ್ದವು. ನಮ್ಮ ಗಮನವೆಲ್ಲಾ ತಾಯಿಯಾನೆ ತನ್ನ ಮಕ್ಕಳನ್ನು ಒದ್ದು ನೀರಿಗೆ ಕೆಡುಹುವ, ಅವು ಹೆದರಿ ಕೂಗಿಕೊಂಡರೆ, ಗಾಬರಿ ಬಿದ್ದು ಓಡಿ ಹೋಗಿ ಸಂತೈಸಿ ಮತ್ತೆ ನೀರಿಗೆ ಬಲವಂತವಾಗಿ ದೂಡುವ ಆಟಗಳತ್ತಲೇ ನೆಟ್ಟಿತ್ತು.

ಇಲ್ಲಿ ನಾವು ಗಮನಿಸಿದ ಮುಖ್ಯ ಸಂಗತಿಯೊಂದು ಅಚ್ಚರಿ ಮೂಡಿಸಿತು. ಈ ಸೂಕ್ಷ್ಮ ನಡವಳಿಕೆಯನ್ನು ನಾವು ಈ ಹಿಂದೆ ಎಂದೂ ಗಮನಿಸಿರಲಿಲ್ಲ. ಅದೇನೆಂದರೆ ಚಟುವಟಿಕೆಯಲ್ಲಿರುವ ಆನೆಗಳು ದಿಢೀರನೆ ಗರಬಡಿದಂತೆ ಒಮ್ಮೆಗೇ, ಒಟ್ಟಿಗೇ ಫ್ರೀಜ್ ಆಗಿ ನಿಲ್ಲುತ್ತಿದ್ದವು. ಸಣ್ಣ ಮಕ್ಕಳು ಸ್ಟ್ಯಾಚು ಎಂದಾಗ ಅಪ್ಪ- ಅಮ್ಮ ಇರುವ ಭಂಗಿಯಲ್ಲೇ ಅಲ್ಲಾಡದೆ ತಟಸ್ಥವಾಗಿ ನಿಲ್ಲುವಂತೆ ಒಂದೆರಡು ನಿಮಿಷ



ಮೌನವಾಗಿ ನಿಂತು ಬಿಡುತ್ತಿದ್ದವು. ಇವು ಯಾಕೆ ಹೀಗೆ ವಿಚಿತ್ರವಾಗಿ ವರ್ತಿಸುತ್ತಿವೆ? ಸಡನ್ನಾಗಿ ಸ್ತಬ್ಧಗೊಂಡು ಕಲ್ಲಿನಂತೆ ನಿಲ್ಲುವುದು ಯಾಕಾಗಿ? ಈ ನಡವಳಿಕೆಯ ಹಿಂದಿರುವ ಉದ್ದೇಶ ಏನಿರಬಹುದೆಂದು ಕುತೂಹಲ ಹೆಚ್ಚಾಯಿತು. ಕರಿಗಳು ಮೇಲೆತ್ತಿದ ಸೊಂಡಿಲು ಹಾಗೇ ಮುಗಿಲಿಗೆ, ಎತ್ತಿದ ಕಾಲು ಕೆಳಗಿಳಿಸದೆ ಹಾಗೆಯೇ ಸ್ಟಿಲ್‌ಫೋಸು. ಇದು ಹಲವು ನಿಮಿಷಕ್ಕೊಮ್ಮೆ ಪುನರಾವರ್ತನೆಯಾಗುತ್ತಿತ್ತು. ಈ ನಡವಳಿಕೆಯ ಹಿಂದಿನ ಮರ್ಮ ಏನೆಂಬುದು ಗೊತ್ತಾಗದೆ ಕಠಿಣ ಪ್ರಶ್ನೆಯನ್ನು ಮನಸ್ಸಿನಲ್ಲಿಯೇ ಮುದ್ರಿಸಿಕೊಂಡಿದ್ದೆ.

ಒಮ್ಮೆ ಕೃಪಾಕರ ಸೇನಾನಿ ಅವರ ಜೊತೆ ಮಾತನಾಡುವಾಗ ಅವರೇ ಈ ವಿಷಯ ಪ್ರಸ್ತಾಪ ಮಾಡಿ 'ಆನೆಗಳು ಯಾಕೆ ಹಾಗೆ ಫ್ರೀಜ್ ಆಗುತ್ತವೆ ಗೊತ್ತಾ?' ಎಂದು ನನ್ನನ್ನು ಪ್ರಶ್ನಿಸಿ ಅಚ್ಚರಿಗೊಳಿಸಿದರು. ನಾನು 'ಗೊತ್ತಿಲ್ಲ ಸರ್' ಎಂದು ಅಮಾಯಕನಾಗಿ ಅವರ ಮುಖವನ್ನು ನೋಡಿದೆ. ಕೃಪಾಕರ ಅವರು ಮಗುವಿನಂತೆ ಮುಗುಳ್ನಕ್ಕು "ದೂರದಲ್ಲಿ ಇನ್ನೊಂದು ಗಜಗಳ ಗುಂಪಿರುತ್ತೆ. ಅವುಗಳ ಜೊತೆ ಇವು ಮಾತಾಡುತ್ತವೆ. ಇಲ್ಲವೇ ಆ ಕಡೆಯಿಂದ ಸಂದೇಶ ಸ್ವೀಕರಿಸುತ್ತವೆ. ಈ ಚಟುವಟಿಕೆ ನಡೆಯುವಾಗ ಅವು ಗಕ್ಕನೆ ಗರ ಬಡಿದಂತೆ ಮೌನ ವಹಿಸಿ ಒಂದೆರಡು ಕ್ಷಣ ನಿಂತು ಆಲಿಸುತ್ತವೆ. ಈ ಮಾತುಕತೆಯ ಸಾರಾಂಶ ಅವಕ್ಕೆ ಮಾತ್ರ ಕೇಳಿಸುತ್ತದೆ. ಈ ಸಂಹವನ ಎಂಟ್ಹತ್ತು ಕಿಲೋ ಮೀಟರ್ ದೂರದಿಂದಲೂ ಬಂದಿರಬಹುದು. ಇನ್ನೂ ಅಚ್ಚರಿ ಏನಂದ್ರೆ ಅಡ್ಡ ಗಿಡ, ಮರಗಳು, ಎತ್ತರದ ಬೆಟ್ಟಗಳು ಇಲ್ಲದ ಬೋಳು ಮರುಭೂಮಿ ಇರುವ ಕಡೆ ಈ ಸಂದೇಶ ನೂರಾಐವತ್ತು ಕಿಲೋ ಮೀಟರ್ ದೂರದಿಂದಲೂ